ಇ) ಜೋಳವನ್ನು ಪಡಿತರ ವಿತರಣೆಯಲ್ಲಿ ತರಲು ಸಾಧ್ಯವಾಗದಿದ್ದಲ್ಲಿ ಅಕ್ಕಿ, ಗೋಧಿ ಮೇಲೆ ನೀಡುವ ಸಹಾಯಧನದ ಮೊತ್ತವನ್ನು ಜೋಳ ಕೊಳ್ಳುವ ಗ್ರಾಹಕರಿಗೆ ನೀಡಲು ಸರ್ಕಾರದವರು ಪರಿಶೀಲಿಸುವರೇ?

ಶ್ರೀ ಜಿ.ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-

ಅ) ಬಂದಿದೆ.

ಆ) ಈಗ ಭಾರತ ಆಹಾರ ನಿಗಮದಿಂದ ಗಿರಣಿಗಳ ಹಂತದಲ್ಲಿ ಲೆವಿ ಅಕ್ಕಿಯನ್ನು ಸಂಗ್ರಹಣೆ ಮಾಡುತ್ತಿದ್ದು, ಸಾರ್ವಜನಿಕ ವಿತರಣಾ ಪದ್ದತಿಯಲ್ಲಿ ಹಂಚಲಾಗುತ್ತಿದೆ. ಉತ್ತರ ಕರ್ನಾಟಕದಲ್ಲಿ ಸಾರ್ವಜನಿಕ ವಿತರಣಾ ಪದ್ದತಿಯ ಮೂಲಕ ಜೋಳ ಹಂಚುವ ಬಗ್ಗೆ ಬೇಡಿಕೆ ಬಂದಿದ್ದು ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ:- ಮಾದಕ ವಸ್ತು ನಿಷೇದ ದಳ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 694 (1137)

ಶ್ರೀ ಎ.ರಾಮದಾಸ್ (ಕೃಷ್ಣರಾಜ):- ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಾದಕ ವಸ್ತು ನಿಷೇಧ ದಳ (ನಾರ್‌ಕೋಟಿಕ್ ಸೆಲ್) ಎಷ್ಟು ಇದೆ?

ಆ) ಕಳೆದ ಒಂದೂವರೆ ವರ್ಷಗಳಲ್ಲಿ ಎಷ್ಟು ಮಾದಕ ವಸ್ತುಗಳನ್ನು ಸರ್ಕಾರದವರು ಜಪ್ತಿ ಮಾಡಿರುವರು?

ಇ) ಈ ಪೈಕಿ ಎಷ್ಟು ಮೊಕದ್ದಮೆಗಳನ್ನು ಹೂಡಲಾಗಿದೆ ಹಾಗೂ ಯಾರ್ಯಾರನ್ನು ಬಂಧಿಸಲಾಗಿದೆ?

ಈ) ಸದರಿ ಪ್ರಕರಣಗಳಲ್ಲಿ ಎಷ್ಟು ಜನರಿಗೆ ಶಿಕ್ಷೆಯಾಗಿದೆ?

ಶ್ರೀ ಆರ್.ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):-

ಅ) ನಾಲ್ಕು (4).

ಆ) ದಿನಾಂಕ 1-1-95 ರಿಂದ 30-6-96ರವರೆಗೆ ಈ ಕೆಳಕಂಡ ಮಾದಕ ವಸ್ತುಗಳನ್ನು ಜಪ್ತಿ ಮಾಡಲಾಗಿದೆ:-

1) ಗಾಂಜ - 2351.524 ಕೆ.ಜಿ. ಹಾಗೂ 1407 ಗಾಂಜ ಗಿಡಗಳು

2) ಅಫೀಮು - 300 ಗ್ರಾಂ

3) ಬ್ರೌನ್ ಶುಗರ್ - 11.163 ಗ್ರಾಂ

4) ಚರಸ್ - 530.500 ಗ್ರಾಂ

5) ಹೆರಾಯಿನ್ - 500 ಗ್ರಾಂ

6) ಕೊಕೈನ್ - 1.321 ಕೆ.ಜಿ.

7) ಟಿಡಿಜಿಸಿಕ್ ಇಂಜೆಕ್ಷನ್ - 695 ಆಂಪ್ಯೂಲ್ಸ್ ಹಾಗೂ ಡೈಜಾಫಾಮ್ ಇಂಜೆಕ್ಷನ್ - 209 ಆಂಪ್ಯೂಲ್ಸ್

ಇ) 230 ಮೊಕದ್ದಮೆಗಳನ್ನು ಹೂಡಲಾಗಿದೆ. 328 ಜನರನ್ನು ಬಂಧಿಸಲಾಗಿದೆ (295 ಗಂಡಸರು ಮತ್ತು 33 ಹೆಂಗಸರು)

ಈ) ಮೊಕದ್ದಮೆಗಳು ವಿಚಾರಣಾ ಹಂತದಲ್ಲಿವೆ ಇದುವರೆಗೂ ಯಾರಿಗೂ ಶಿಕ್ಷೆಯಾಗಿರುವುದಿಲ್ಲ.

ವಿಷಯ:- ದಕ್ಷಿಣ ಕನ್ನಡ ಜಿಲ್ಲೆಯ ಕೃಷಿಕರಿಗೆ ನೀರಾವರಿ ಹೊಳೆಗಳಿಗೆ ಅಣೆಕಟ್ಟು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 698 (380)

ಶ್ರೀ ಎ.ರುಕ್ಮಯ ಪೂಜಾರಿ (ವಿಟ್ಲ):- ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿಗೆ ನೀರಿನ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ದಕ್ಷಿಣ ಕನ್ನಡ ಜಿಲ್ಲೆಯ ಹೊಳೆಗಳಿಗೆ ಕಿಂಡಿ ಅಣೆಕಟ್ಟುಗಳನ್ನು ಕಟ್ಟಿ ಕೃಷಿಕರಿಗೆ ನೀರು ಕೊಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):-

ಅ) ಇಲ್ಲ.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗ 42 ಕಿಂಡಿ ಅಣೆಕಟ್ಟುಗಳು ಕಾರ್ಯನಿರ್ವಹಿಸುತ್ತಿವೆ. 1996-97ನೇ ಸಾಲಿನ ಆಯವ್ಯಯದಲ್ಲಿ 31 ಕಿಂಡಿ ಅಣೆಕಟ್ಟುಗಳು ಸೇರಿದ್ದು, ಇದರಲ್ಲಿ 9 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ ಹಾಗೂ 6 ಕಾಮಾಗಾರಿಗಳು ಪ್ರಗತಿಯಲ್ಲಿರುತ್ತದೆ. ಉಳಿದ 16 ಕಾಮಗಾರಿಗಳಿಗೆ ಅಂದಾಜುಗಳು ತಯಾರಿಕೆ ಹಂತದಲ್ಲಿರುತ್ತದೆ.

ವಿಷಯ:- ಹಿರೇಕೆರೂರು ನಗರದ ಕೆಲವು ಮನೆಗಳಿಗೆ ಮಂಜೂರಾದ ಭಾಗ್ಯಜ್ಯೋತಿಯನ್ನು ಕೆಲವು ತಿಂಗಳ ನಂತರ ಕಿತ್ತು ಹಾಕಿರುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 700 (941)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ಇಂಧನ ರಾಜ್ಯ ಸಚಿವರು ಈ